(ಇಂದು ದಿನಾಂಕ 27-06-2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಜಿ.ಪಿ.ಟಿ. ವಕೀಲರಿಂದಃ</u>**

ನಾನು ಎಂ.ಬಿ.ಬಿ.ಎಸ್. ಚಿತ್ರದುರ್ಗದಲ್ಲಿ ಮಾಡಿರುತ್ತೇನೆ. ನಾನು PG entrance ಪರೀಕ್ಷೆಗೆ ಹಾಜರಾಗಲು ಬೆಂಗಳೂರಿನಲ್ಲಿ ತರಭೇತಿ ಪಡೆಯುತ್ತಿದ್ದೇನೆ. ನಾನು ಕಾರವಾರ ಸಿವಿಲ್ ಆಸ್ಪತ್ರೆಯಲ್ಲಿ Junior Assistant ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಒಂದು ವಿಡಿಯೋವನ್ನು ಚಿತ್ರೀಕರಣ ಮಾಡಿ ಡೌನಲೋಡ್ ಮಾಡಿದ್ದನ್ನು ಸೈಬರ ಸೆಂಟರಗೆ ತೆಗೆದುಕೊಂಡು ಹೋಗಿದ್ದೆ. ಅದನ್ನು ಲಕ್ಕಿ ಸೈಬರ್ ಸೆಂಟರ್, ಮಾರುತಿ ಗಲ್ಲಿಯಲ್ಲಿ ನಾನು ಕೊಟ್ಟು ಸಿಡಿ ತಯಾರು ಮಾಡಿರುತ್ತೇನೆ. ಖಾಲಿ ಸಿಡಿಯನ್ನು ನಾನೇ ಖರೀದಿ ಮಾಡಿ ಸೈಬರ್ ಸೆಂಟರಗೆ ಕೊಟ್ಟಿದ್ದೆ. ಪೆನ್ ಡ್ರೈವ್‌ನಿಂದ ಸಿಡಿಗೆ ಲಕ್ಕಿ ಸೈಬರ್ ಸೆಂಟರನ ಸಿಬ್ಬಂದಿ ಹಾಕಿರುತ್ತಾರೆ. ಆ ಕಾರಣ ಪೆನ್ ಡ್ರೈವ್‌ನಿಂದ ಸಿಡಿಗೆ ಹಾಕುವ ಕೆಲಸ ಸೈಬರ ಸೆಂಟರನವರು ಮಾಡಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ಸಿಡಿಯನ್ನು ಲಕ್ಕಿ ಸೈಬರ ಸೆಂಟರನವರು ತಯಾರು ಮಾಡಿದ್ದರು ಎಂದರೆ ಸರಿ. ಆ ಕಾರಣ ನನಗೆ ಕಲಂ 65(ಬಿ) ಪ್ರಮಾಣಪತ್ರ ಕೊಡಲು ಅರ್ಹತೆ

ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೇವಲ ನನ್ನ ತಂದೆಗೆ ಬೆಂಬಲ ಕೊಡುವ ಉದ್ದೇಶದಿಂದ ಸುಳ್ಳು ಕಲಂ 65(ಬಿ) ಪ್ರಮಾಣಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಚ್.ಎಸ್.ಎಸ್. ವಕೀಲರಿಂದಃ**

2 ಮತ್ತು 3 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ